ದಿಃ 27.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ 03 ನೇ ಎದುರುದಾರರ ಪರ ಶ್ರೀ. ಕೆ.ಎನ್.ಹೆಚ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ಯು.ಎಂ.ಹೆಚ್ ವಕೀಲರಿಂದಃ**

1. ನಿಆರ್-03 ವಿಮಾ ಪ್ರತಿಯನ್ನು ನಮ್ಮ ಕಚೇರಿಯಿಂದಲೇ ಕೊಟ್ಟಿರುತ್ತೇವೆ ಎಂದರೆ ಸರಿ, ಸಾಕ್ಷಿಯು ಚೆಕ್ ನಲ್ಲಿ ಬರೆದಿರುವ ಹಣ ನಗಧೀಕರಣವಾಗುವುದಕ್ಕಿಂತ ಮುಂಚ್ಚೆಯೇ ವಿಮಾ ಪ್ರತಿಯನ್ನು ಕೊಟ್ಟಿರುತ್ತೇವೆ. ನಿಆರ್-03 ರಲ್ಲಿ ಹಣವನ್ನು ಯಾವಾ ರೀತಿ ಪಾವತಿ ಮಾಡಿರುತ್ತಾರೆಂದು ಹೇಳಿ ನಮೂದು ಮಾಡಿರುವುದಿಲ್ಲ. ನಿಆರ್-03 ರಲ್ಲಿ ಚೆಕ್ ಮೂಖಾಂತರ ಹಣ ಪಾವತಿ ಮಾಡಿರುತ್ತಾರೆಂದು ಹೇಳಿ ಬರೆದಿರುವುದಿಲ್ಲ. ಚೆಕ ನಗಧೀಕರಣ ವಾಗಿರುವುದಿಲ್ಲ ಎಂದು ಹೇಳಿ ವಿಮಾದಾರರಿಗೆ ನಮ್ಮ ಕಂಪನಿಯಿಂದ ನೋಟಿಸ್ ಅನ್ನು ಕೊಟ್ಟಿರುತ್ತಾರೆ. ನಾವು ನೀಡಿದ ನೋಟಿಸ್ ಅನ್ನು ವಾಹನ ಮಾಲೀಕರು ಸ್ವೀಕರಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ನೋಟಿಸಿ ಅಥವಾ ಸ್ವೀಕೃತಿ ಪ್ರತಿಯನ್ನು ನ್ಯಾಯಾಯಲಕ್ಕೆ ಹಾಜರುಪಡಿಸಿರುವುದಿಲ್ಲ.ಅಮಾನ್ಯಗೊಂಡ ಚೆಕ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಆರ್-03 ವಿಮಾ ಪ್ರತಿ ಎಲ್ಲಿಂದ ಎಲ್ಲಿಯ ತನಕ ಚಾಲ್ತಿಯಲ್ಲಿರುತ್ತದೆ ಎಂದರೆ ಸಾಕ್ಷಿಯು ಅದು ಚಾಲ್ತಿಯಲ್ಲಿರುವುದಿಲ್ಲ ಎಂದು ಹೆಳುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೆಳಿರುವ ಎಲ್ಲಾ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯವಿಚಾರಣೆಯಲ್ಲಿ ಪೊಲೀಸರ ಸಹಾಯದಿಂದ ಕೆಎ-14-ಸಿ-2554 ವಾಹನವನ್ನು ಸೇರಿಸಲಾಗಿದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ದಿಃ 22-11-2022 ರಂದು ಅಪಘಾತ ವಾದ ದಿವಸ ವಾಹನದ ಸಂಖ್ಯೆ ಕೆಎ-14-ಸಿ 2554 ವಾಹನಕ್ಕೆ ವಿಮೆ ಚಾಲ್ತಿಯಲ್ಲಿತ್ತು ಎಂದರೆ ಸರಿಯಲ್ಲ. ವಾಹನದ ಮಾಲೀಕರು ಮತ್ತು ಚಾಲಕರು ವಿಮಾದ ಷರತ್ತುಗನ್ನು ಉಲ್ಲಂಘನೆ ಮಡಿರುವುದಿಲ್ಲ ಎಂದರೆ ಸರಿಯಲ್ಲ. ನಾವೇ ಅರ್ಜಿದಾರರಿಗೆ ಪರಿಹಾರ ಕೊಡಲು ಬಾದ್ಯಾಸ್ಥರಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

(**ರಾಘವೇಂದ್ರ. ಡಿ**)

ಪ್ರ.ಹಿ.ದಿ.ನ್ಯಾಯಾಧೀಶರು,ಭದ್ರಾವತಿ.